# ಆಹಾ ಸುದ್ದಿ!

★ ಸಸಿತೋಟ



ಚೀನಾದಲ್ಲಿ ತ್ರಿಚಕ್ರ ವಾಹನದ ಮೇಲೆ ಕಪ್ಪು ರಂಗಿನ ಸೆಡಾನ್ ಕಾರನ್ನು ಹೊತ್ತೊಯ್ದುದ್ದು ಯಾಕೆ ಎಂಬ ಕುತೂಹಲವಿರಬಹುದು. ತ್ರಿಚಕ್ರ ವಾಹನದ ಚಾಲಕ ಕಾರನ್ನು 800 ಯುವಾನ್ (ಸುಮಾರು 8,300 ರೂಪಾಯಿ)ಗೆ ಖರೀದಿಸಿ ಜಂಕ್ ಯಾರ್ಡ್‌ನಲ್ಲಿ ಅದರ ಬಿಡಿ ಭಾಗಗಳನ್ನು ಮಾರಲು ಉದ್ದೇಶಿಸಿದ್ದನಂತೆ. ಆದರೆ ಈ ವ್ಯವಹಾರ ಉಲ್ಟಾ ಹೊಡೆದಿದ್ದು ಪೊಲೀಸರು ಚಾಲಕನಿಗೆ 1300 ಯುವಾನ್ (13,500 ರೂಪಾಯಿ) ದಂಡ ವಿಧಿಸಿದರಂತೆ. ಕಾರನ್ನು ಹೊತ್ತುಕೊಂಡು ಹೋಗಿದ್ದಕ್ಕೆ ತ್ರಿಚಕ್ರ ವಾಹನ ಖುಷಿ ಪಟ್ಟದ್ದೇ ಬಂತು.

ಮೀನಿನ ಮಳೆ ಬಗ್ಗೆ ಆಗಾಗ ಸುದ್ದಿಯನ್ನು ಕೇಳಿರಬಹುದು. ಆದರೆ ಕೆನಡಾದ ನಗರವೊಂದರಲ್ಲಿ ಮಾನವ ಮಲದ ಮಳೆ ಸುರಿದಿದೆಯಂತೆ. ರಸ್ತೆಯಲ್ಲಿ ಹೋಗುತ್ತಿದ್ದವರ ಮುಖ, ಕೆಲವರ ಬಾಯಿಯ ಮೇಲೆ ಈ ಮಲದ ಮಳೆ ತನ್ನ ಪ್ರತಾಪ ತೋರಿಸಿದೆಯಂತೆ. ಇದರ ಬೆನ್ನು ಹತ್ತಿ ಹೋದರೆ ಪತ್ತೆಯಾಗಿದ್ದು, ಸೋರುತ್ತಿದ್ದ ವಿಮಾನವೊಂದರ ಶೌಚಾಲಯ. ಭೂಮಿಯ ಮೇಲಿನ ಶೌಚಾಲಯ ಸೋರಿದರೆ ಪಾದ ತೊಳೆಯಬಹುದಷ್ಟೇ, ಆದರೆ ಆಕಾಶದಿಂದಲೇ ಸೋರಿದರೆ ಅಭಿಷೇಕದ ಭಾಗ್ಯ.



ಭಾರತದಲ್ಲಿ ಬಿಸಿಲಿಗೆ ಕಾದು ಕೆಂಡವಾದ ಟಾರ್ ರಸ್ತೆಯ ಮೇಲೆ ಮೊಟ್ಟೆಯ ಆಮ್ಲೆಟ್ ಮಾಡಿದಂತೆ ಚೀನಾದಲ್ಲಿ ಕಾದ ಕಾರಿನ ಬಾನೆಟ್ ಮೇಲೆ ಮೀನು ಹುರಿಯುವ ಮಹಿಳೆಯ ಚಿತ್ರ ವೈರಲ್ ಆಗಿದೆ. ಅಲ್ಲಿ ತಾಪಮಾನ 40 ಡಿಗ್ರಿ ತಲುಪಿದೆಯಂತೆ. ಮೊಟ್ಟೆಯ ನಂತರ ಕೋಳಿ ಬರಬೇಕಿತ್ತು, ಮೀನು ಬಂತು ಎಂದು ಬೀದಿ ಬದಿಯ ಜ್ಯೋತಿಷಿಗಳು ಕವಡೆಯ ಲೆಕ್ಕಾಚಾರ ಹಾಕುತ್ತಿರಬಹುದು.

ಬಿಳಿ ಉಡುಪು ಧರಿಸಿ ಭೋಜನ ಸವಿಯುವುದು ಪ್ಯಾರಿಸ್‌ನಲ್ಲಿ ವರ್ಷಕ್ಕೊಮ್ಮೆ ನಡೆಯುವ ವಿಶೇಷವಂತೆ. ದಿಢೀರ್ ಅಂತ ನಡೆಯುವ ಈ ಕಾರ್ಯಕ್ರಮ ಬಯಲೂಟವಾಗಿದ್ದು, ಪರಸ್ಪರ ಫೋನ್ ಮೂಲಕ ಸಂಪರ್ಕಿಸಿ ಹಾಜರಾಗುತ್ತಾರಂತೆ.





ಚೀನಾದಲ್ಲಿ ವ್ಯಕ್ತಿಯೊಬ್ಬ ತಾನು ಸತ್ತ ಮೇಲೆ ತನ್ನ ದೇಹವನ್ನು ಹುಂಡೈ ಸೊನಾಟಾ ಕಾರಿನಲ್ಲಿ ಹಾಕಿ ಹೂಳಬೇಕು ಎಂದು ಉಯಿಲು ಬರೆದಿಟ್ಟು ಸತ್ತನಂತೆ. ಪಾಪ, ಚಿಕ್ಕಂದಿನಿಂದ ಆತನಿಗೆ ಕಾರೆಂದರೆ ಪ್ರಾಣ ಎಂದು ಅಲವತ್ತುಕೊಂಡ ಕುಟುಂಬದವರು ಅಸ್ತು ಎಂದರು. ದೊಡ್ಡ ಸಮಾಧಿ ಹೊಂಡವನ್ನು ತೋಡಿ ಹೆಣವಿದ್ದ ಕಾರನ್ನು ಯಂತ್ರ ತರಿಸಿ ಇಳಿಸಿದರಂತೆ. ಸದ್ಯ, ಆತನಿಗೆ ವಿಮಾನದ ಮೇಲೆ ಅಷ್ಟು ಇಷ್ಟವಿರಲಿಲ್ಲ ಎನಿಸುತ್ತದೆ. ಕಾರಿನಲ್ಲಿ ಗಂಟೆಗೆ 100 ಕಿ.ಮೀ.ನಂತೆ ಚಲಿಸಿ ಸ್ವರ್ಗ ಸೇರಲು ಎಷ್ಟು ದಿನ ಬೇಕಾಗುತ್ತದೋ!

ಪ್ಯಾರಿಸ್‌ನಲ್ಲಿ ಇತ್ತೀಚೆಗೆ ವಿಶ್ವದ ಲಂಬೂಗಳ ಸಮಾವೇಶ ನಡೆಯಿತಂತೆ. ಸಮಾವೇಶದಲ್ಲಿ ಏನು ಮಾತನಾಡಿಕೊಂಡರೋ ಗೊತ್ತಿಲ್ಲ. ಆದರೆ ಪ್ಯಾರಿಸ್ ರಸ್ತೆಗಳಲ್ಲಿ ಎತ್ತರದ ಮರ ಚಲಿಸಿದಂತೆ ಅವರು ನಡೆಯುತ್ತಿದ್ದರೆ ಉಳಿದವರು ತಮ್ಮ ಕತ್ತು ನೋವಿನ ಬಗ್ಗೆ ಮಾತನಾಡಿಕೊಂಡರಂತೆ.